ಅಧ್ಯಕ್ಷರು: ಬೆಳಿಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಈಗ ಪ್ರಮೀಳಾ ನೇಸರ್ಗಿಯವರು ಆಬ್ಸೆಂಟ್, ಬಸವನಗೌಡ ಪಾಟೀಲ್ ಆಬ್ಸೆಂಟ್, ಶ್ರೀಮಾರೆಡ್ಡಿ ಆಬ್ಸೆಂಟ್,ಪುಟ್ಟಣ್ಣಯ್ಯ ಆಬ್ಸೆಂಟ್ ಈಗ ಚಿಮ್ಮನಕಟ್ಟಿ ಮಾತನಾಡಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಈಗ ಬಹಳ ಅನಿವಾರ್ಯತೆಯಿಂದ ಇದನ್ನು ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು: ಹೇಳಿ ತೊಂದರೆ ಇಲ್ಲ.

(ಊ) ಬಾಗಲ ಕೋಟೆ ಜಿಲ್ಲೆ ಉದ್ಘಾಟನೆ ಸಂದರ್ಭದಲ್ಲಿ ಶಾಸಕರಿಗೆ ಅಗೌರವ ಸೂಚಿಸಿರುವುದು.

+ ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮೊನ್ನೆ ಆಗಸ್ಟ್ 15 ರಂದು ನಮ್ಮ ಬಾಗಲಕೋಟೆ ಜಿಲ್ಲೆ ಉದ್ಘಾಟನೆಯಾಯಿತು. ಅಂದು ಜಿಲ್ಲೆ ಅಸ್ತಿತ್ವಕ್ಕೆ ಬಂದಿತು. ಆ ಒಂದು ಶುಭ ಸಂದರ್ಭದಲ್ಲಿ ನಾವು ವೇದಿಕೆ ಮೇಲೆ ಕೂಡ ಹಾಗೂ ಸದನದಲ್ಲೂ ಸರ್ಕಾರದ ಈ ಒಳ್ಳೆಯ ಕೆಲಸಕ್ಕಾಗಿ ಅವರನ್ನು ಶ್ಲಾಘನೆ ಮಾಡಿದ್ದೇವೆ. ಅಂದು ಆ ಕಾರ್ಯಕ್ರಮದಲ್ಲಿ ಒಳ್ಳೆಯ ಮಾತುಗಳನ್ನು ಎಲ್ಲರೂ ಕೂಡ ಆಡಿದ್ದೇವೆ. ಅಂತಹ ಒಂದು ಐತಿಹಾಸಿಕ ಸಂದರ್ಭ ಬಂದಾಗ ಆ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ಶಾಸಕರುಗಳನ್ನು ಕೂಡ ಒಂದು ಮರ್ಯಾದೆ ಕೊಡತಕ್ಕಂಥ ಕೆಲಸವನ್ನು ಸರ್ಕಾರದವರು ಮಾಡಬೇಕಾಗಿತ್ತು. ಅಲ್ಲಿ ಕಾರ್ಡ್ ಪ್ರಿಂಟ್ ಮಾಡಿಸಿದ್ದರು. ಎಲ್ಲಾ ಶಾಸಕರ ಹೆಸರುಗಳನ್ನು ಹಾಕಿಸಿ ಅವರಿಗೆ ವಿಶೇಷ ಆಮಂತ್ರಿತರನ್ನಾಗಿ ಮಾಡಿದ್ದರು. ಇದು ಅಗೌರವ ತರತಕ್ಕಂಥ ಕೆಲಸ. ಹೋಗಲಿ ಅದೂ ಅಲ್ಲದೆ ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು ಶಿಲಾನ್ಯಾಸ ಮಾಡಿದರು. ಡಿ.ಸಿ. ಆಫೀಸ್ ಮಾಡಿದರು, ಪೊಲೀಸ್ ವರಿಷ್ಠಾಧಿಕಾರಿಗಳ ಆಫೀಸ್‌ನ್ನು ಮಾಡಿದರು. ಆ ಶಿಲಾನ್ಯಾಸ ಮಾಡಿದ್ದರಲ್ಲಿ ಅಲ್ಲಿ ಪ್ರತಿನಿಧಿಸತಕ್ಕಂಥ ಯಾವ ಶಾಸಕರುಗಳ ಹೆಸರೂ ಕೂಡ ಇರಲಿಲ್ಲ. ಇದನ್ನು ನಾನು ಏಕೆ ಹೇಳುತ್ತೇನೆಂದರೆ ಯಾವುದೋ ಒಂದು ತಾಲ್ಲೂಕು ಅಥವಾ ಕ್ಷೇತ್ರದಲ್ಲಿ ಕಾರ್ಯಕ್ರಮವಾಗಿದ್ದರೆ ನಾವು ಅಷ್ಟೊಂದು ಪ್ರಾಮುಖ್ಯತೆ ಕೊಡುತ್ತಿರಲಿಲ್ಲ. ಇದೊಂದು ಐತಿಹಾಸಿಕ ಕಾರ್ಯಕ್ರಮ. ಈ ಕಾರ್ಯಕ್ರಮದನ್ವಯ ಅಲ್ಲಿ ನನ್ನೊಬ್ಬನ ಹೆಸರು ಎಂದು ಹೇಳುವುದಿಲ್ಲ. ಅಲ್ಲಿ ಸಂಬಂಧಪಟ್ಟಿರತಕ್ಕಂಥ ಜಿಲ್ಲಾ ಶಾಸಕರ ಹೆಸರುಗಳನ್ನು ಹಾಕದೇ ಇರುವುದು ಸರ್ಕಾರದ ಒಂದು ದೊಡ್ಡ ನ್ಯೂನ್ಯತೆ. ಆ ನ್ಯೂನ್ಯತೆಯನ್ನು ಹೋಗಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ಕೈಗೊಳ್ಳುತ್ತದೆಂದು ಕೇಳುತ್ತೇನೆ.

+ ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ (ಕ್ರೀಡಾ ಮತ್ತು ಯುವಜನ ಸೇವಾ ಸಚಿವರು): ಮಾನ್ಯ ಅಧ್ಯಕ್ಷರೇ, ಬಾಗಲಕೋಟೆ ಜಿಲ್ಲೆ ಉದ್ಘಾಟನೆ ಆಗುವಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಕಾರ್ಡ್‌ನ್ನು ಪ್ರಿಂಟ್ ಮಾಡಿದ್ದರು ಅದರಲ್ಲಿ ಆ

ಒಂದು ಜಿಲ್ಲೆಗೆ ಸಂಬಂಧಪಟ್ಟ ಶಾಸಕರ ಹೆಸರುಗಳನ್ನು ವಿಶೇಷ ಆಹ್ವಾನಿತರು ಎಂದು ಹಾಕಿದ್ದರು. ಆಗ ನಾವು ಬೆಂಗಳೂರಿನಲ್ಲಿ ಇದ್ದೆವು. ಆ ಕಾರ್ಡ್ ನಮ್ಮ ಗಮನಕ್ಕೆ ಬಂದ ಮೇಲೆ ಆಗಿದ್ದಾಗ್ಗೆ ನಾನು ಮತ್ತು ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ರಮೇಶ್ ಜಿಗಜಿಣಗಿಯವರು ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ಕಾರ್ಡ್‌ನ್ನು ತಕ್ಷಣ ಬದಲಾವಣೆ ಮಾಡಿ ಅದರಲ್ಲಿ ವಿಶೇಷ ಆಹ್ವಾನಿತರು ಎನ್ನುವುದನ್ನು ತೆಗೆದು ಅತಿಥಿಗಳು ಎಂದು ಹಾಕಬೇಕೆಂದು ಆದೇಶ ಕೊಟ್ಟಮೇಲೆ ಅಲ್ಲಿ ಬೇರೆ ಕಾರ್ಡ್ ಪ್ರಿಂಟ್ ಮಾಡಿ ಹಂಚಿದ್ದು ಆಗಿದೆ. ಮಾನ್ಯ ಸದಸ್ಯರು ಇನ್ನೊಂದು ವಿಚಾರವಾಗಿ ಹೇಳುತ್ತಾ ಅಲ್ಲಿ ಕಲ್ಲಿನ ಮೇಲೆ ಹೆಸರು ಇಲ್ಲವೆಂದು ಹೇಳಿದರು. ಅವತ್ತು ಮಾನ್ಯ ಮುಖ್ಯಮಂತ್ರಿಗಳು ರಾತ್ರಿ ಅಲ್ಲಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಕಲ್ಲಿನ ಮೇಲೆ ಎಲ್ಲಾ ಶಾಸಕರ ಹೆಸರುಗಳನ್ನು ಹಾಕಿದ್ದೇವೆ. ಆದರೆ ಡಿ.ಸಿ. ಆಫೀಸ್ ಮತ್ತು ಎಸ್.ಪಿ. ಆಫೀಸ್ ಏನು ಉದ್ಘಾಟನೆ ಮಾಡಿದ್ದಾರೆ ಅಲ್ಲಿ ಏನಾಯಿತು ಎಂದರೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದು ಕೇವಲ ಆಫೀಸ್ ಉದ್ಘಾಟನೆ ಮಾಡಿ ಹೋಗಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೆವು. ಆದರೆ ಕೊನೆ ಗಳಿಗೆಯಲ್ಲಿ ಇಲ್ಲ ಅಲ್ಲಿ ಒಂದು ಕಲ್ಲನ್ನು ಹಾಕಿ ಅದನ್ನು ಉದ್ಘಾಟನೆ ಮಾಡಬೇಕೆಂದು ಹೇಳಿದಾಗ ಮಾನ್ಯ ಜಿಲ್ಲಾಧಿಕಾರಿಗಳು ಇಲ್ಲ, ಅದು ಗಡಿಬಿಡಿಯಾಯಿತು, ಈಗ ಎಲ್ಲಾ ಅದಕ್ಕೆ ಬರೆಸಿ ಹಾಕಿಸಿದ್ದೆವು, ಅದಕ್ಕೋಸ್ಕರ ಅದನ್ನು ಚೇಂಜ್ ಮಾಡಿ ಎಲ್ಲಾ ಈ ಜಿಲ್ಲೆಗೆ ಸಂಬಂಧಪಟ್ಟ ಶಾಸಕರ ಹೆಸರುಗಳನ್ನು ಹಾಕುವುದಕ್ಕೆ ನಾನು ಹೇಳಿದ್ದೇನೆ.

(ಋ) ಮಡಿಕೇರಿ ತಾಲ್ಲೂಕಿನ ಭಾಗಮಂಡಲದಲ್ಲಿ ನಡೆದಿರುವ ಸಣ್ಣ ಮಕ್ಕಳ ಕೊಲೆಗಳು

+ ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ಅಧ್ಯಕ್ಷರೇ, ಈ ವರ್ಷದ ಏಪ್ರಿಲ್ 29ರಂದು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಭಾಗಮಂಡಲದಲ್ಲಿ ಸುಮಾರು ಗ್ರಾಮದಲ್ಲಿ ಎರಡು ಪುಟ್ಟ ಮಕ್ಕಳ ಕೊಲೆಯಾಗಿದೆ. ಆ ಪುಟ್ಟ ಇಬ್ಬರು ಮಕ್ಕಳನ್ನು ಕತ್ತು ಹಿಚುಕಿ ಕೊಲೆಗೈದಿದ್ದಾರೆ. ಸಾವೂರು ಗ್ರಾಮದ ಕೊಳೆಬೈಲು ಎಂಬಲ್ಲಿ ನಾರಾಯಣ್ ಅವರ ಪುತ್ರ ಯಶವಂತ, 10 ವರ್ಷ ಪ್ರಾಯ, ಮತ್ತು ಅವರ ನೆರೆಮನೆಯ ಮಗು ಸಂಗೀತ, ಬೈರಪ್ಪನವರ ಮಗಳು, 14ವರ್ಷ ಪ್ರಾಯ. ಇಡೀ ಜಿಲ್ಲೆಯಲ್ಲಿ ಆ ಪುಟ್ಟ ಮಕ್ಕಳ ಕೊಲೆ ಜಿಲ್ಲೆಯನ್ನು ನಡುಗಿಸಿದೆ. ಕಾರಣ ಅಲ್ಲಿ ಕಾವೇರಿ ಹುಟ್ಟಿದ ಜಾಗ. ಅಲ್ಲಿ ಕೊಲೆ ನಡೆದು ಇಡೀ ಜಿಲ್ಲೆಯನ್ನು ತಲ್ಲಣಗೊಳಿಸಿದೆ. ಆದರೆ ಅದು ಕೊಲೆಯಾಗಿ ನಾಲ್ಕು ತಿಂಗಳಾದನಂತರ ಇಲ್ಲಿಯವರೆಗೂ ಸಹ ಪೊಲೀಸ್ ಅಧಿಕಾರಿಗಳು ವಿಚಾರಣೆ ಮಾಡುತ್ತಿದ್ದರೂ ಸಹ, ಇನ್ನೊಂದು ದುರಂತವಾಯಿತು ಎಂದರೆ ನಾರಾಯಣ್ ಎನ್ನುವವರ ತಂಗಿ, ಆಕೆಯನ್ನು ವಿಚಾರಣೆಗೆ ಜೂನ್ 17ರಂದು ಕರೆದುಕೊಂಡು ಹೋಗಿದ್ದು ಜೂನ್ 20ರವರೆಗೆ ಪೊಲೀಸ್ ಸ್ಟೇಷನ್‌ನಲ್ಲಿ ಇಟ್ಟುಕೊಂಡು ಜೂನ್ 22ರಂದು ಒಂದು ಹಣ ಸಿಗುತ್ತದೆ. ಅದು ನಾರಾಯಣ್‌ರವರ ತಂಗಿ. ಅವಳು ಈ ಮಕ್ಕಳನ್ನು ಕೊಲೆ ಮಾಡಿರಬಹುದು ಎಂದು ಹೇಳಿ ಅವಳ ಶವ ಅಪರಿಚಿತ ಶವ ಎಂದು